3746 (B)

ಕರ್ನಾಟಕ ಲೋಕಾಯುಕ್ತ

ನಂ:ಕಂ.ಲೋಕ್.ಬಿಸಿಡಿ 2524/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:19/09/2019

ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ಕಗ್ಗದಾಸಪುರ ಕೆರೆಗೆ** ಸಂಬಂದಪಟ್ಟಂತೆ ದಿನಾಂಕ: **05-09-2019 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿದ್ದು** ಆದೇಶದ ನಿರ್ದೇಶನದಂತೆ ಕ್ರಮ ವಹಿಸತಕ್ಕದ್ದು.

ಮುಂದುವರೆದು ಸದರಿ ಪ್ರಕರಣವನ್ನು ದಿನಾಂಕ:19-11-2019 ರಂದು 3-00 ಗಂಟೆಗೆ ಮುಂದಿನ ವಿಚಾರಣೆಗೆ ನಿಗಧಿಪಡಿಸಿದೆ.

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

**1) Sri. C.E.O., Namma Bangalore foundation, 2nd floor, No54, Rockline centre, Richmond Road, Bangalore.**

**2) Sri. K.V.Ravi, Executive Engineer, BBMP (Lakes), Bangalore**

**3) Sri. Rajashekar, Executive Engineer, BWSSB, Bangalore**

**4) S.Rajashekar, Environmental Officer, Bangalore city(east), Karnataka State Pollution Control Board, Nisarga Bhavan, Thimmaiah Road, 7th D Main, Shivanagar, Bangalore. No.23224830**

**5) Sri. H.R.Ravi, Surveyor, Bangalore East Taluk, Bangalore.**

**6) Tahsildar, Bangalore East Taluk, Bangalore.**

## KARNATAKA LOKAYUKTA, BENGALURU

No.Compt/LOK/BCD-2524/2018/ARE-1 Date : 05.09.2019

**KAGGADASPURA LAKE -**

## O R D E R

On behalf of the complainant Sri H.S.Doreswamy, Sri Lakshmikanth is present. Sri R.V.Bhat, Law Officer, Karnataka State Pollution Control Board, Bengaluru is present along with Sri S.Rajshekar, Environmental Officer, East Range, Bengaluru and filed a Status Report dated 4.9.2019. It is useful to extract the same which reads as follows –

"ಸಂಖ್ಯೆ: ಕರಾಮಾನಿಮಂ/ಬೆನಪೂ/ಲೋಕಾಯುಕ್ತ/2019–20/809/ ದಿನಾಂಕ: 04.09.2019

**ಇವರಿಗೆ,**
ಅಪರ ನಿಬಂಧಕರು, ವಿಚಾರಣೆಗಳು–1,
ಕರ್ನಾಟಕ ಲೋಕಾಯುಕ್ತ,
ಬಹುಮಹಡಿ ಕಟ್ಟಡ,
ಬೆಂಗಳೂರು

**ಮಾನ್ಯರೇ,**

ವಿಷಯ : ಹೆಚ್.ಎಸ್.ದೊರೆಸ್ವಾಮಿಯವರು ನೀಡಿರುವ ದೂರಿನ ಕುರಿತು.
ಉಲ್ಲೇಖ: ಕರ್ನಾಟಕ ಲೋಕಾಯುಕ್ತ ಪತ್ರ ಸಂಖ್ಯೆ: ಲೋಕ್.ಬಿಸಿಡಿ 2524/2018
ದಿನಾಂಕ. 07.06.2019

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 30.07.2019 ರಂದು ಈ ಕಛೇರಿ ವ್ಯಾಪ್ತಿಗೆ ಬರುವ ಕಗ್ಗದಾಸಪುರ ಕೆರೆ, ಸಿ.ವಿ.ರಾಮನ್ ನಗರ, ಬೆಂಗಳೂರು ಈ ಕಛೇರಿಯ

ಅಧಿಕಾರಿಗಳು ಪರಿವೀಕ್ಷಿಸಿ, ಪರಿವೀಕ್ಷಣಾ ವರದಿಯನ್ನು ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ
ಸಹಿ/-

ಪರಿಸರ ಅಧಿಕಾರಿ
ಬೆಂಗಳೂರು ನಗರ ಪೂರ್ವ

## ಕಗ್ಗದಾಸಪುರ ಕೆರೆಯ ಪರಿವೀಕ್ಷಣಾವರದಿ

| | | |
|---|---|---|
| ಪರಿವೀಕ್ಷಣೆ ಮಾಡಿದ ಅಧಿಕಾರಿಗಳ ಹೆಸರು | : | 1. ರಾಜಶೇಖರ ಎಸ್. ಪರಿಸರ ಅಧಿಕಾರಿ ಪ್ರಾ.ಕ.ಬೆಂಗಳೂರು ನಗರ ಪೂರ್ವ<br>2. ರಮೇಶ ವಿ, ಉಪ ಪರಿಸರ ಅಧಿಕಾರಿ |
| ಪರಿವೀಕ್ಷಣಾ ದಿನಾಂಕ | : | 30.07.2019 |
| ಪರಿವೀಕ್ಷಣಾ ಕೆರೆ | : | ಕಗ್ಗದಾಸಪುರ ಕೆರೆ, ಸಿ.ವಿ.ರಾಮನ್ ನಗರ, ಬೆಂಗಳೂರು |

*****

ಕಗ್ಗದಾಸಪುರ ಕೆರೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ ಆರ್ ಪುರಂ ಹೋಬಳಿ, ಕಗ್ಗದಾಸ ಪುರ ಗ್ರಾಮದ ಸರ್ವೆ ನಂ 141 ರಲ್ಲಿ 32 ಎಕರೆ 16 ಗುಂಟೆ ಮತ್ತು ಭೈರಸಂದ್ರ ಗ್ರಾಮದ ಸರ್ವೆ ನಂ 5 ರಲ್ಲಿ 14 ಎಕರೆ 24 ಗುಂಟೆಯಿದ್ದು ಒಟ್ಟು 47 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಉಸ್ತುವಾರಿ ಅಭಿವೃದ್ಧಿ ಜವಾಬ್ದಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವ್ಯಾಪ್ತಿಗೆ ಬರುತ್ತದೆ. ಸದರಿ ಕೆರೆಯನ್ನು ದಿನಾಂಕ 30.07.2019 ರಲ್ಲಿ ಈ ಕಛೇರಿಯ ಅಧಿಕಾರಿಗಳು ಪರಿವೀಕ್ಷಿಸಿ ಕೆಳಕಂಡಂತೆ ವರದಿ ನೀಡಲಾಗಿದೆ;

1. ಕೆರೆಗೆ ಉತ್ತರ ಭಾಗದಿಂದ ಹಾಗೂ ಪಶ್ಚಿಮ ಭಾಗದಿಂದ ಮಳೆ ನೀರಿನ ಚರಂಡಿ ಮೂಲಕ ಗೃಹತ್ಯಾಜ್ಯ ನೀರು (sewage) ಕೆರೆಯನ್ನು ಸೇರುತ್ತಿದ್ದು ಕೆರೆಯ ನೀರು ಮಲಿನವಾಗಿದೆ.
2. ಕೆರೆಯಲ್ಲಿ ಸಂಪೂರ್ಣ ಹೂಳು ತುಂಬಿದ್ದು ಹಾಗೂ ಜೊಂಡು (weeds) ತುಂಬಿರುತ್ತದೆ. ಕೆರೆಯ ನೀರನ್ನು ಯಾವುದೇ ಚಟುವಟಿಕೆಗೆ ಬಳಸುತ್ತಿಲ್ಲ.
3. ಉತ್ತರ ಭಾಗದಿಂದ ಹರಿಯುತ್ತಿರುವ ಮಳೆ ನೀರು ಚರಂಡಿಯು ಸಿಮೆಂಟಿನ ತಡೆಗೋಡೆ ನಿರ್ಮಿಸಿ ಘನ ತ್ಯಾಜ್ಯ ವಿಸರ್ಜಿಸಿದಂತೆ ತಂತಿ ಬೇಲಿಯನ್ನು ಅಳವಡಿಸಲಾಗಿದೆ.
4. ಕೆರೆಯ ಅಂಗಳದಲ್ಲಿ ಎರಡು ಎಕರೆ ಭೂಮಿಯನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೊಚ್ಚು ನೀರು ಸಂಸ್ಕರಣಾ ಘಟಕ ಸ್ಥಾಪಿಸಲು ಗುರುತಿಸಲಾಗಿದೆ.
5. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆರೆ ಸಂರಕ್ಷಣಾ ವಿಭಾಗದವರು ಕೆರೆ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿರುತ್ತಾರೆ.

6. ನೀರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿವತಿಯಿಂದ ವಿಶ್ಲೇಷಿಸುತ್ತಿದ್ದು, ದಿನಾಂಕ 22.05.2019 ರಂದು ಸಂಗ್ರಹಿಸಿದ ಕೆರೆಯ ನೀರಿನ ಮಾದರಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ 'ಕ್ಲಾಸ್ ಇ' ವರ್ಗಕ್ಕೆ ಒಳಪಡುತ್ತದೆ. ವಿಶ್ಲೇಷಣಾ ವರದಿಯನ್ನು ತಮ್ಮ ಮಾಹಿತಿಗೆ ಲಗತ್ತಿಸಲಾಗಿದೆ.
7. ಕೆರೆಯನ್ನು ಪುನರುಜ್ಜೀವನಗೊಳಿಸಿ ಅಭಿವೃದ್ಧಿ ಪಡಿಸಲು ಮತ್ತು ತ್ಯಾಜ್ಯ ನೀರಿನ ಸಂಸ್ಕರಣಾ ಘಟಕ ನಿರ್ಮಿಸುವ ಕಾರ್ಯಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರಾರಂಭಿಸಬೇಕಾಗಿದೆ.

ಸಹಿ/-
**ಉಪ ಪರಿಸರ ಅಧಿಕಾರಿ**

ಸಹಿ/-

**ಪರಿಸರ ಅಧಿಕಾರಿ**
**ಬೆಂಗಳೂರು ನಗರ ಪೂರ್ವ"**

2) The Karnataka State Pollution Control Board has made certain recommendations at item No.7 of the report extracted above, which indicates that the BBMP and the BWSSB authorities have to take steps to rejuvenate the lake for installation of sewerage treatment plant by them respectively.

3) On behalf of BWSSB Sri Rajashekara, Executive Engineer is present and he has filed a Status Report dated 31.8.2019. It is useful to extract the same which reads as follows –

"ಮೇಲಿನ ವಿಷಯದ ಬಗ್ಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಜಲಮಂಡಳಿಯು ಕಗ್ಗದಾಸಪುರ ಕೆರೆಯ ಬಳಿ 5 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಲು ಒಂದು ಯೋಜನೆಯನ್ನು ರೂಪಿಸಿ ಈ ಕಾಮಗಾರಿಗೆ ಈಗಾಗಲೇ ಟೆಂಡರ್‌ಗಳನ್ನು ಕರೆಯಲಾಗಿದೆ. ಪೂರ್ವಾರ್ಹತೆಯುಳ್ಳ ಸಂಸ್ಥೆಗಳಿಂದ

ಟೆಂಡರ್‌ಗಳನ್ನು ದಿನಾಂಕ 05-09-2019ರಂದು ಸ್ವೀಕರಿಸಲು ನಿಗದಿಪಡಿಸಲಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಿ ಅವುಗಳ ಪ್ರಕ್ರಿಯೆ ಕಾರ್ಯ ಮಾಡಿ ಕಾಮಗಾರಿಯನ್ನು ಪೂರ್ವಾರ್ಹತೆಉಳ್ಳ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸುಮಾರು ಎರಡು ತಿಂಗಳುಗಳ ಕಾಲಾವಕಾಶ ಬೇಕಾಗುವುದು. ಈ ಕಾಮಗಾರಿಯನ್ನು ಪೂರ್ಣ ಮಾಡಲು 18 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆ.

ಈ ಘಟಕದ ಕಾಮಗಾರಿಯನ್ನು ಪೂರ್ಣ ಮಾಡಿ ಘಟಕವನ್ನು ಕಾರ್ಯಚಾಲನೆ ಮಾಡಿದರೆ ಪ್ರಸ್ತುತ ಕಗ್ಗದಾಸಪುರ ಕೆರೆಗೆ ಹರಿಯುತ್ತಿರುವ ತ್ಯಾಜ್ಯ ನೀರನ್ನು ತಪ್ಪಿಸಲು ಸಾಧ್ಯವಾಗುವುದು ಹಾಗೂ ಈ ಘಟಕದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೆರೆಗೆ ಹರಿಸುವುದರಿಂದ ಈ ಕೆರೆಯ ಮಾಲಿನ್ಯವನ್ನು ತಡೆಗಟ್ಟಲು ಸಾಧ್ಯವಾಗುವುದು."

4) As it can be seen from the Status Report dated 31.8.2019, the BWSSB authorities have already taken steps to call for tenders for the purpose of installing 5 MLD Sewerage Treatment Plant. Sri R.V.Bhat, Law Officer of KSPCB also submitted that the KSPCB have released ₹ 6,62,96,000/- on 11.2.2019. In this connection, he has placed before me the proceedings dated 22.3.2019, held with BWSSB. The said proceeding is placed on record.

5) A Status Report is required to be filed with regard to the steps taken for installation of 5 MLD Sewerage Treatment Plant by the BWSSB and BBMP for rejuvenation of the lake by the next date of hearing.

6) Sri Ravi.H.R. Surveyor is present. He has filed a Status Report dated 4.6.2019. It is useful the extract the said Status Report, which reads as here under –

ಕರ್ನಾಟಕ ಸರ್ಕಾರ

"ನಂ. ಭೂ.ಸ.ನಿ/ಪೋ/ಇತರೆ/ **39/2019-20**.

**ಭೂದಾಖಲೆಗಳ ಸಹಾಯಕ ನಿರ್ದೇಶಕರವರ ಕಛೇರಿ**
**ಬೆಂಗಳೂರು ಪೂರ್ವ ತಾಲ್ಲೂಕು. ಕೆ.ಆರ್.ಪುರ.**
**ಬೆಂಗಳೂರು. ದಿನಾಂಕ: 04-06-2019.**

ಮಾನ್ಯ ಭೂದಾಖಲೆಗಳ ಜಂಟಿ ನಿರ್ದೇಶಕರು
ಜಿಲ್ಲಾಧಿಕಾರಿಗಳ ಕಛೇರಿ
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

**ಮಾನ್ಯರೇ,**

**ವಿಷಯ:** ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಕಗ್ಗದಾಸಪುರ ಗ್ರಾಮದ ಕೆರೆಯ ಜಂಟಿ ಅಳತೆ ಬಗ್ಗೆ:

**ಉಲ್ಲೇಖ:** 1. ಗೌರವಾನ್ವಿತ ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ನೋಟೀಸು ಸಂಖ್ಯೆ: ಕಂ.ಲೋಕ್.ಬಿಸಿಡಿ:2524/2018/2018, ದಿನಾಂಕ: 19-03-2019.
2. ತಮ್ಮ ಕಛೇರಿ ಪತ್ರದ ಸಂಖ್ಯೆ: ಭೂ.ಜಂ.ನಿ/ತಾಂ(7)ವಿ.ವ:134/2018-19, ದಿನಾಂಕ: 29-03-2019.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಕಗ್ಗದಾಸಪುರ ಗ್ರಾಮದ ಕೆರೆ ಒತ್ತುವರಿಗೆ ಸಂಬಂಧಿಸಿದ ನಕ್ಷೆಯೊಂದಿಗೆ ವರದಿ ಸಲ್ಲಿಸಲು ಉಲ್ಲೇಖ(1) ರಂತೆ ಸೂಚಿಸಿ ಬಂದ ಪತ್ರದ ಮೇರೆಗೆ

ತುರ್ತಾಗಿ ಅಳತೆಗೆ ಸಂಬಂಧಿಸಿದಂತೆ ವೃತ್ತ ಭೂಮಾಪಕರನ್ನು ಅಳತೆ ಕಾರ್ಯಕ್ಕಾಗಿ ನಿಯೋಜಿಸಿ ಮೇಲ್ಕಂಡ ಕಗ್ಗದಾಸಪುರ ಕೆರೆ ಜಂಟಿ ಅಳತೆ ಕೆಲಸ ನಿರ್ವಹಿಸಿ ಒತ್ತುವರಿಗೆ ಸಂಬಮಧಿಸಿದ ನಕ್ಷೆಯೊಂದಿಗೆ ಸ್ಪಷ್ಟವಾದ ವರದಿಯನ್ನು ಸಲ್ಲಿಸಲು ಉಲ್ಲೇಖ(2) ರಂತೆ ಸೂಚಿಸಲಾಗಿರುತ್ತದೆ.

ಮೇಲ್ಕಂಡ ಕೆ.ಆರ್.ಪುರ ಹೋಬಳಿ, ಕಗ್ಗದಾಸಪುರ ಗ್ರಾಮದ ಸ.ನಂ. 141 ಮತ್ತು ಬೈರಸಂದ್ರ ಗ್ರಾಮದ ಸ.ನಂ. 5 ರ ಕೆರೆ ಅಳತೆ ಕೆಲಸ ನಿರ್ವಹಿಸಿ ಒತ್ತುವರಿಗೆ ಸಂಬಂಧಿಸಿದ ನಕ್ಷೆಯೊಂದಿಗೆ ಸ್ಪಷ್ಟವಾದ ವರದಿ ಸಲ್ಲಿಸಲು ವೃತ್ತ ಭೂಮಾಪಕರಿಗೆ ಪ್ರಕರಣ ಹಂಚಿಕೆ ಮಾಡಲಾಗಿತ್ತು. ಭೂಮಾಪಕರು ಕಂದಾಯ ಇಲಾಖೆ ಹಾಗೂ ಬಿಬಿಎಂಪಿ ಇಲಾಖೆ ಅಧಿಕಾರಿಗಳೊಂದಿಗೆ ಜಂಟಿ ಅಳತೆ ಕೆಲಸ ನಿರ್ವಹಿಸಿ ಮೇಲ್ಕಂಡ ಸ.ನಂಬರುಗಳ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ನಕ್ಷೆಯೊಂದಿಗೆ ಸ್ಪಷ್ಟವಾದ ವರದಿಯನ್ನು ಈ ಕಛೇರಿಗೆ ಸಲ್ಲಿಸಿದ್ದು ಭೂಮಾಪಕರು ಸಲ್ಲಿಸಿರುವ ಸದರಿ ಎರಡು ಪ್ರತಿ ನಕ್ಷೆಗಳನ್ನು ಈ ಕೂಡ ಲಗತ್ತಿಟ್ಟು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಸಹಿ/-
ಭೂದಾಖಲೆಗಳ ಸಹಾಯಕ ನಿರ್ದೇಶಕರು
ಬೆಂಗಳೂರು ಪೂರ್ವ ತಾಲ್ಲೂಕು
ಬೆಂಗಳೂರು

ಪ್ರತಿಯನ್ನು:

ಗೌರವಾನ್ವಿತ ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಮಾಹಿತಿಗಾಗಿ ಒಂದು ಪ್ರತಿ ನಕ್ಷೆಯೊಂದಿಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಸಹಿ/-
ಭೂದಾಖಲೆಗಳ ಸಹಾಯಕ ನಿರ್ದೇಶಕರು
ಬೆಂಗಳೂರು ಪೂರ್ವ ತಾಲ್ಲೂಕು
ಬೆಂಗಳೂರು"

7) Along with the Status Report, he has filed a sketch. The sketch shows the encroachment of the lake bed. He submits a copy of the Survey Report of the lake and also the sketch showing the encroachment has already been served on the Tahsildar.

8) In the course of hearing Sri Jagadeesh who is a resident of Kaggadasapura submitted that one Sri Jalakanteshwara Temple is a very old temple, which is from the time of Chola Dynasty and one Sri Muneshwara temple is there in existence for the past several years. In the light of the statement made by Sri Jagadeesh, at this stage I do not find any justification for giving a specific direction for removal of the temple. However, it is needless to point out that all other encroachments, other than the road and park formed in public interest is required to be removed by the Tahsildar, Bengaluru East Taluk and the Status Report is required to be filed by the next date of hearing.

Communicate this order to the parties concerned. List this case on **19th November, 2019 at 3.00 p.m.**

**Justice P.Vishwanatha Shetty** 5/9/2019
Lokayukta
State of Karnataka

*vl

9) Additional Registrar of Enq.1